# ಶ್ರೀಮಾತೆಯವರ ಆಧ್ಯಾತ್ಮಿಕ ವ್ಯಕ್ತಿತ್ವ

❑ ಡಾ. ಕೆ. ಅನಂತರಾಮು

**ಹೆಸರಾಂತ ಬರಹಗಾರರಾದ ಡಾ. ಕೆ. ಅನಂತರಾಮು ಅವರು ಮೈಸೂರು ವಿಶ್ವವಿದ್ಯಾನಿಲಯದ ಸಂಜೆಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿದ್ದಾರೆ. ಈ ಲೇಖನದಲ್ಲಿ ಶ್ರೀಮಾತೆಯವರ ಜೀವನದ ಸೊಬಗಿನೊಂದಿಗೆ ಲೇಖಕರ ಸಾಹಿತ್ಯದ ಸೊಬಗೂ ಸೇರಿಕೊಂಡಿದೆ.**

## ನಾನು ನಿಮ್ಮ ಮನೆಗೆ ಬರುತ್ತೇನೆ

ಶ್ರೀಮಾತೆ ಶಾರದಾದೇವಿಯವರ ಆಧ್ಯಾತ್ಮಿಕ ವ್ಯಕ್ತಿತ್ವವೆಲ್ಲ ಅವರ ಜೀವನಕಥೆಯಲ್ಲಿಯೇ ಅಡಕವಾಗಿದೆ. ಇಂದಿನ ಪಶ್ಚಿಮ ಬಂಗಾಳದ ಬಾಂಕುರಜಿಲ್ಲೆಯ ಜಯರಾಂಬಾಟಿ ಎಂಬ ನಿಸರ್ಗ ಸುಂದರ ಕಿರುಗ್ರಾಮದಲ್ಲಿ ಅವರು ೨೨.೧೨.೧೮೫೩ರಲ್ಲಿ ಅವತರಿಸಿದರು. ರಾಮಚಂದ್ರಮುಖರ್ಜಿ ಮತ್ತು ಶ್ಯಾಮಸುಂದರಿದೇವಿ ಎಂಬ ಸುಸಂಸ್ಕೃತ, ದೈವಭಕ್ತ, ದಾನಶೀಲ ದಂಪತಿಗಳ ಮೊದಲ ಸಂತಾನವಾಗಿ ತೋರಿಕೊಂಡರು. ಶ್ಯಾಮಸುಂದರೀದೇವಿ ತನ್ನ ತೌರೂರಾದ ಸಿಹೋರ್‌ಗ್ರಾಮದ ಜಾತ್ರೆಗೊಮ್ಮೆ ಹೋಗಿದ್ದಾಗ, ವಿಶ್ರಾಂತಿಗಾಗಿ ಒಂದು ಬಿಲ್ವವೃಕ್ಷದ ಬುಡದಲ್ಲಿ ತನ್ನಷ್ಟಕ್ಕೆ ತಾನು ಕುಳಿತಿದ್ದಳು. ಆಗಲೇ ಮುಂಪರು ಕವಿದಂತಾಗಿ ರೇಷ್ಮೆಸೀರೆಯುಟ್ಟ ಪುಟ್ಟ ಬಾಲೆಯೊಬ್ಬಳು ಕಾಲ್ಗೆಜ್ಜೆಗಳನ್ನು ಝಣಝಣಿಸುತ್ತ ಬಂದು, ಆ ಪುಣ್ಯಶೀಲೆಯನ್ನು ಪ್ರೇಮದಿಂದ ಅಪ್ಪಿಕೊಂಡು, ತರುವಾಯ ಆಕೆಯ ಒಡಲೊಳಗೇ ಐಕ್ಯವಾದಂತೆ ದಿವ್ಯ ದರ್ಶನವೊಂದು ತೋರಿತು. ರಾಮಚಂದ್ರಮುಖರ್ಜಿಗೆ ಕೂಡ ಈ ಘಟನೆಯನ್ನೇ ಹೋಲುವ ಅಪೂರ್ವ ಸ್ವಪ್ನವೊಂದು ಅದೇ ಆಸುಪಾಸಿನಲ್ಲಿ ಬಿದ್ದಿತ್ತು. "ಮಗುವೆ, ನೀನು ಯಾರು?" ಎಂದು ಮುಖರ್ಜಿ ಕೇಳಿದರು. ಆ ಬಾಲಕಿ ಮಧುರ ಕಂಠದಿಂದ "ನಾನು ನಿಮ್ಮ ಮನೆಗೆ ಬರುತ್ತೇನೆ" ಎಂದಷ್ಟೇ ಹೇಳಿದಳು. ಅದೆಲ್ಲ ಆದ ಮೇಲೆ ಪರಾಶಕ್ತಿಯೇ ಶ್ರೀಮಾತೆ ಶಾರದಾದೇವಿಯಾಗಿ ಅವತರಿಸಿ ಅವರ ಮನೆಮನಗಳನ್ನು ಬೆಳಗಿಸಿದಳು.

## ನೀನು ಯಾರನ್ನು ಮದುವೆಯಾಗುತ್ತೀಯೆ ?

ಶ್ಯಾಮಾಸುಂದರೀದೇವಿ ತನ್ನೂರಿನ ಸಿಹೋರ್ ಜಾತ್ರೆಗೊಮ್ಮೆ ಹೋಗಿದ್ದ ಹೊತ್ತಿನಲ್ಲಿ ಶ್ರೀಮಾತೆಯನ್ನು ಕರೆದೊಯ್ದಿದ್ದಳು. ಆಗಿನ್ನೂ ಶ್ರೀಮಾತೆಗೆ ಮೂರುವರ್ಷ. ಪ್ರಸಂಗವಶಾತ್ ಶ್ರೀರಾಮಕೃಷ್ಣರೂ ಆ ಹೊತ್ತಿನಲ್ಲಿ ಅಲ್ಲಿಗೆ ಹೋಗಿದ್ದರು. ನಾರೀಮಣಿಯರೆಲ್ಲ ಸಂಭ್ರಮದಿಂದ ಕಲೆತು ಸರಸಸಲ್ಲಾಪಗಳಲ್ಲಿ ತೊಡಗಿದ್ದಾಗ, ಅವರುಗಳು ಶ್ರೀಮಾತೆಯನ್ನು ಉದ್ದೇಶಿಸಿ, ಅಲ್ಲಿ ನೆರೆದಿದ್ದ ಹುಡುಗರನ್ನೆಲ್ಲ ತೋರಿಸುತ್ತ "ನೀನು ಈ ಹುಡುಗರ ಪೈಕಿ ಯಾರನ್ನು ಮದುವೆಯಾಗುತ್ತೀಯೆ?" ಎಂದು ಕೇಳಿದರು. ಆಗ ಶ್ರೀಮಾತೆಯವರು ಅದೇನು ಸೋಜಿಗವೋ, ಶ್ರೀರಾಮಕೃಷ್ಣರತ್ತ ಕೈತೋರಿಸಿ, "ಅವರನ್ನು ಮದುವೆಯಾಗುತ್ತೇನೆ" ಎಂದು ಹೇಳಿದರು. ಆಗ ಹೆಂಗಳೆಯರೆಲ್ಲ ಉಲ್ಲಾಸದಿಂದ ಕಿಲಕಿಲನೆ ನಕ್ಕರು. ತನ್ನ ಅಧ್ಯಾತ್ಮ ಸಾಧನೆಯ ಪುಣ್ಯಪಥವನ್ನು ಪರಿಷ್ಕರಿಸಿಕೊಡುವ ಪರಮಪುರುಷನನ್ನು ಆ ಬಾಲೆ ತೋರಿಸುತ್ತಿದ್ದಾಳೆ ಎಂಬುದನ್ನು ಆ ಮುಗುದೆಯರೇನು ಬಲ್ಲರು? ಆ ಎಳವೆಯಲ್ಲಿಯೇ ಶ್ರೀಮಾತೆಯವರು ಜಗದ್ಧಾತ್ರಿಯ ಸನ್ನಿಧಾನದಲ್ಲಿ ಭಕ್ತಿ ಪರವಶರಾಗಿ, ಏಕಾಗ್ರಮನಸ್ಸಿನಿಂದ, ಧ್ಯಾನಮಗ್ನರಾಗಿ ಅದೆಷ್ಟೋ ಹೊತ್ತು ಕುಳಿತುಬಿಡುತ್ತಿದ್ದರು. ಆ ಭಂಗಿಯನ್ನು ತದೇಕಚಿತ್ತರಾಗಿ ನೋಡುವವರ ಕಂಗಳಿಗೆ ಶ್ರೀಮಾತೆಯ ಮುಖಮಂಡಲದಲ್ಲಿ ಲೋಕೋತ್ತರವಾದ ಪ್ರಭೆಯೊಂದು ಲಾಸ್ಯವಾಡುತ್ತಿರುವುದು ಗೋಚರಿಸುತ್ತಿತ್ತು. ಅಷ್ಟುಮಾತ್ರವಲ್ಲ, ಜಗದ್ಧಾತ್ರಿಯ ಪ್ರತಿಮೆಯ ಮುಖಾರವಿಂದವೇ ಶ್ರೀಮಾತೆಯವರ ಮುಖಾರವಿಂದವಾಗಿ ಆ ಹೊತ್ತಿನಲ್ಲಿ ಅಭೇದವಾಗಿ ಬೆಳಗುತ್ತಿತ್ತು.



## ನಿಜಾನಂದದಿಂದ ವಂಚಿತರಾಗುವವರಲ್ಲ

ಜಗನ್ಮಾತೆಯ ಲೀಲಾವಿನೋದದ ಒಂದು ಅಂಕವೋ ಎಂಬಂತೆ ಶ್ರೀಮಾತೆಯ ಕಲ್ಯಾಣವು, ಲೋಕಕಲ್ಯಾಣಾರ್ಥವಾಗಿ, ಅವರ ಐದನೆಯ ವಯಸ್ಸಿಗೇ ನಡೆದುಹೋಯಿತು. "ಅವರನ್ನು

ಮದುವೆಯಾಗುತ್ತೇನೆ" ಎಂದು ಈ ಹಿಂದೆ ಯಾರನ್ನು ತೋರಿಸಿದ್ದರೋ ಆ ಶ್ರೀರಾಮಕೃಷ್ಣರೇ ಪತಿದೇವರಾದರು. ಶ್ರೀರಾಮಕೃಷ್ಣರೇ ನೀಡಿದ ಸೂಚನೆಯನ್ನು ಅನುಸರಿಸಿ ಶ್ರೀಮಾತೆಯವರನ್ನು ಅವರಿಗೆ ವಧುವಾಗಿ ತಂದುಕೊಂಡರು. ಶ್ರೀರಾಮಕೃಷ್ಣರಿಗಾಗ ಇಪ್ಪತ್ತಮೂರು ವರ್ಷ. ಸಂಸಾರದ ಕೋಟಲೆಗಳಲ್ಲಿ ಸಿಲುಕಿ ಸವೆಯುವುದಿದ್ದರೆ ತಾನೆ ವರಸಾಮ್ಯದ ಪರೀಕ್ಷೆ! ವಿವಾಹ ಕಾಲದಲ್ಲೇ ಅದೆಲ್ಲ ಮಾಯಾವಿಲಾಸವೆಂಬುದು ಬಯಲಾಗಿಬಿಟ್ಟಿತು! ಪುರಂಧ್ರಿಯರು ನವದಂಪತಿಗಳನ್ನು ಪ್ರದಕ್ಷಿಣೆ ಮಾಡುತ್ತ, ಇಪ್ಪತ್ತೇಳು ಬತ್ತಿಗಳ ದೀಪಾರತಿ ಬೆಳಗುತ್ತಿದ್ದಾಗ ಅಕಸ್ಮಾತ್ತಾಗಿ ಶ್ರೀರಾಮಕೃಷ್ಣರ ಕೈಗೆ ಅರಿಶಿನದಲ್ಲಿ ಅದ್ದಿಕಟ್ಟಿದ್ದ ಹಸೆಯಸೂಲು ಉರಿತಗುಲಿ ಉರಿದುಹೋಯಿತು. ಈ ದಂಪತಿಗಳು ಪ್ರಾಕೃತರಂತೆ ವಿಷಯಸುಖಗಳಲ್ಲಿ ನಿಮಗ್ನರಾಗಿ ನಿಜಾನಂದದಿಂದ ವಂಚಿತರಾಗುವವರಲ್ಲ ಎಂಬುದಕ್ಕೆ ಅದು ಮುನ್ನುಡಿಯಾಗಿತ್ತು.

## ಆತ್ಮವಿದ್ಯಾಪಾರಂಗತೆ ಶ್ರೀಮಾತೆ

ಶ್ರೀಮಾತೆಯವರು ತಮ್ಮ ಹದಿಹರಯದಲ್ಲಿ ಕೊಲ್ಕತಾದ ದಕ್ಷಿಣೇಶ್ವರಕ್ಕೆ ಬಂದು, ಶ್ರೀರಾಮಕೃಷ್ಣರ ಸಾಮೀಪ್ಯದಲ್ಲಿ ನೆಲೆಗೊಂಡರು. ಎಳವೆಯಲ್ಲಿ ಅವರು ವ್ಯವಸ್ಥಿತವಾಗಿ ಶಾಲೆಯ ಅಕ್ಷರ ವಿದ್ಯೆಯನ್ನು ಕಲಿಯದಿದ್ದರೂ, ತಮ್ಮ ಪರಿಸರದ ಸಾಂಸ್ಕೃತಿಕ ಸಂಭ್ರಮದ ಸಂಪರ್ಕದಿಂದಲೆ ಬೇಕಾದಷ್ಟು ಲೋಕಜ್ಞಾನವನ್ನು ಸಂಪಾದಿಸಿಕೊಂಡಿದ್ದರು. ತಕ್ಕಷ್ಟು ಓದುಬರಹವೂ ಬರುತ್ತಿತ್ತು. ಆದರೆ 'ಪತಿಗೃಹ'ಕ್ಕೆ ಬಂದಮೇಲೆ ಶ್ರೀರಾಮಕೃಷ್ಣರ ಸಾನ್ನಿಧ್ಯದಿಂದ ನಿಜವಾದ ಅರ್ಥದಲ್ಲಿ 'ಅಕ್ಷರವಿದ್ಯೆ'ಗೆ ಒಡತಿಯಾದರು. ಯಾವ ವಿದ್ಯೆಯನ್ನು ಕಲಿತರೆ ಸಕಲ ವಿದ್ಯೆಗಳನ್ನೂ ಕಲಿತಂತಾಗುತ್ತದೆಯೋ ಅಂತಹ ಅಕ್ಷರ ವಿದ್ಯೆಯಲ್ಲಿ, ಆತ್ಮವಿದ್ಯೆಯಲ್ಲಿ ಪಾರಂಗತೆಯಾಗಿ ಅವರು ಮೇಲೆದ್ದು ಬಂದರು; ಶ್ರೀರಾಮಕೃಷ್ಣರ ಪಟ್ಟಶಿಷ್ಯೆಯಾಗಿಬಿಟ್ಟರು.

## ಒಂದೇ ಹದಕ್ಕೆ ಶ್ರುತಿಮಾಡಿಟ್ಟ ವೀಣೆಗಳು

ಸಾಂಸಾರಿಕ ವಿಷಯಭೋಗಗಳಿಂದ ವಿಮುಖರಾಗಲು ಬೇಕಾದ ಮುಕ್ತಿಬೀಜ, ಶ್ರೀಮಾತೆಯ ಹೃದಯದಲ್ಲಿ ಶೈಶವದಲ್ಲಿಯೇ ಮೊಳಕೆಯೊಡೆದಿತ್ತು. ಅದನ್ನು ಶ್ರೀರಾಮಕೃಷ್ಣರು ನೀರುಗೊಬ್ಬರವೆರೆದು ಹೆಮ್ಮರವಾಗಿ ಬೆಳೆಸಿದರು. "ನೋಡು, ಈ ಜಗತ್ತು ಕೇವಲ ಅನಿತ್ಯ, ಕ್ಷಣಭಂಗುರ; ಈಗುಂಟು ಈಗಿಲ್ಲ, ಇಂಥ ಜಗತ್ತಿನ ವಿಷಯದಲ್ಲಿ ಅನಾಸಕ್ತಿ, ಭಗವಂತನ ವಿಷಯದಲ್ಲಿ ಅನುರಕ್ತಿ—ಇವೇ ತುಂಬ ಮುಖ್ಯವಾದ ಅಂಶಗಳು. ಸುಮ್ಮನೆ ನರಿನಾಯಿಗಳ ತರಹ ಒಂದಷ್ಟು ಮಕ್ಕಳನ್ನು ಹಡೆದರೆ ಏನು ಬಂದಹಾಗಾಯಿತು? ಈ ಮಕ್ಕಳು ಮರಿ ರಗಳೆಯೇ ಇಲ್ಲದೆಹೋಯಿತು ಅಂದರೆ ನಿನಗೆ ನೀನೇ ಯಜಮಾನಿ; ನೀನು ಎಂದೆಂದಿಗೂ ಸರ್ವಸ್ವತಂತ್ರಳಾಗಿರಬಹುದು" ಎಂದು ಮನಬಿಚ್ಚಿ ಹೇಳಿದರು. ಶ್ರೀಮಾತೆಯವರು ಅದನ್ನು ಮನವಿಟ್ಟು ಕೇಳಿದರು; "ಹಾಗೆಯೇ ಆಗಲಿ" ಎಂದು ಅನುಮೋದಿಸಿದರು. ಶ್ರೀಮಾತೆಯವರೂ ಶ್ರೀರಾಮಕೃಷ್ಣರೂ ಒಂದೇ ಹದಕ್ಕೆ ಶ್ರುತಿಮಾಡಿಟ್ಟ ಎರಡು ವೀಣೆಗಳಂತಿದ್ದರು. ಒಂದನ್ನು ಮಿಡಿದರೆ ಸಾಕು; ಮತ್ತೊಂದು ತನಗೆ ತಾನೇ ಅನಾಯಾಸವಾಗಿ ಝೇಂಕರಿಸುತ್ತಿತ್ತು. ಶ್ರೀರಾಮಕೃಷ್ಣರೊಡನೆ ಏಕಶಯ್ಯೆಯಲ್ಲಿದ್ದಾಗಲೂ ಕಾಯ ಸಹಜವಾದ ಕಾಮಕ್ಕೆ ಕುರುಡಾಗದೆ, ತಾವು ಆಜನ್ಮ ಬ್ರಹ್ಮಚಾರಿಣಿಯೆಂಬುದನ್ನು ತೋರಿಸಿಕೊಟ್ಟರು. ತಮ್ಮ ತನುಮನಧನಗಳನ್ನೆಲ್ಲ ಸಂಪೂರ್ಣವಾಗಿ ಶ್ರೀರಾಮಕೃಷ್ಣರಿಗೆ ಸಮರ್ಪಿಸಿ, ಆ ಪುಣ್ಯಚೇತನವನ್ನು ದೇದೀಪ್ಯಮಾನವಾಗಿ ಬೆಳಗಿಸಿ, ತಾವೂ ಆ ಅವಿರಳ ಕಾಂತಿಯಲ್ಲಿ ಒಂದಾಗಿ ಬೆಳಗಿದರು. "ನಿನಗೆ ಸಂಸಾರದ ಅಪೇಕ್ಷೆಯಿದ್ದರೆ ಅದನ್ನು ನಾನು ಪೂರೈಸುತ್ತೇನೆ" ಎಂದು ಶ್ರೀರಾಮಕೃಷ್ಣರು ಕೇಳಿದ್ದಕ್ಕೆ ಶ್ರೀಮಾತೆಯವರು, ಅವರಿಗಿಂತ ಸಾಧನೆಯಲ್ಲಿ ಒಂದು ಹೆಜ್ಜೆ ಮುಂದೆಯೇ ಇದ್ದೇನೆ ಎಂಬುದನ್ನು ಸ್ಫುಟಗೊಳಿಸಲೋ ಎಂಬಂತೆ, "ನಾನು ನಿಮ್ಮ ಸತಿಯಾದುದು ನಿಮಗೆ ಸಹಾಯಮಾಡಲೇ ಹೊರತು ನಿಮ್ಮ ದಾರಿಯನ್ನು ಬದಲಿಸುವುದಕ್ಕಲ್ಲ" ಎಂದು ನುಡಿದಾಗ ಪರಮಹಂಸರೂ ಮೂಕವಿಸ್ಮಿತರಾಗಿರಲೇಬೇಕು! "ಚಂದ್ರನಲ್ಲಾದರೂ ಕಲೆಗಳಿವೆ; ನನ್ನ ಮನಸ್ಸಿನಲ್ಲಿ ಮಾತ್ರ ಯಾವುದೇ ಕಲೆಗಳು ಇಲ್ಲದಂತಾಗಲಿ" ಎಂದು ಶ್ರೀಮಾತೆ ಭಗವಂತನಲ್ಲಿ ಪ್ರಾರ್ಥಿಸಿಕೊಂಡದ್ದು ವ್ಯರ್ಥವಾಗಲಿಲ್ಲ.

## ಅಮ್ಮಾ, ನಾನು ನಿನ್ನ ಮಗಳು ಶಾರದೆ

ಎಂತಹ ಕಟುಕರ ಹೃದಯವನ್ನೂ ಬೆಣ್ಣೆಯಾಗಿ ಕರಗಿಸಬಲ್ಲ ಪ್ರಭಾವಪೂರ್ಣವಾದ ದಿವ್ಯವಾಣಿ ಶ್ರೀಮಾತೆಗೆ ಒಲಿದಿತ್ತು. ಒಮ್ಮೆ ಶ್ರೀಮಾತೆಯವರು ಜಯರಾಂಬಾಟಿಯಿಂದ ದಕ್ಷಿಣೇಶ್ವರಕ್ಕೆ ಕಾಲ್ನಡಿಗೆಯಲ್ಲಿ ಪ್ರಯಾಣ ಮಾಡುತ್ತಿದ್ದಾಗ ಅವರ ಜೊತೆಯವರೆಲ್ಲ ವೇಗವಾಗಿ ಮುನ್ನಡೆದು, ಶ್ರೀಮಾತೆಯೊಬ್ಬರೇ ಕಾಡಿನ ಕತ್ತಲೆಯ ಏಕಾಂತದಲ್ಲಿ ಸಿಕ್ಕಿಬಿದ್ದರು. ಆಗಲೇ ಡಕಾಯಿತನೊಬ್ಬನು ಎಲ್ಲವನ್ನು ಸುಲಿಯಲು ಪ್ರತ್ಯಕ್ಷನಾದನು. ಅವನು ತನ್ನ ಎಂದಿನ ಧಾಟಿಯಲ್ಲಿ ಗರ್ಜಿಸಿದನಾದರೂ ಶ್ರೀಮಾತೆಯವರು ವಿಚಲಿತರಾಗಲಿಲ್ಲ. ತಮ್ಮ ಅಮೃತೋಪಮವಾದ ವಾಣಿಯಿಂದ ಆ ದರೋಡೆಕೋರನನ್ನು ಉದ್ದೇಶಿಸಿ "ಅಪ್ಪಾ, ನನ್ನ ಜೊತೆಯಲ್ಲಿದ್ದವರೆಲ್ಲ ಮುಂದೆ ಮುಂದೆ ಹೋಗಿಬಿಟ್ಟರು. ನಾನು ದಾರಿತಪ್ಪಿ ಒಬ್ಬಂಟಿಗಳಾಗಿಬಿಟ್ಟೆ. ನಿನ್ನ 'ಅಳಿಯಂದಿರು' ದಕ್ಷಿಣೇಶ್ವರದ ಕಾಳಿದೇವಾಲಯದಲ್ಲಿ ವಾಸವಾಗಿದ್ದಾರೆ. ನೀನು ನನ್ನನ್ನು ಅವರ ಬಳಿ ಕರೆದುಕೊಂಡುಹೋದರೆ, ಅವರು ನಿನ್ನನ್ನು ತುಂಬ ವಿಶ್ವಾಸದಿಂದ ನೋಡಿಕೊಳ್ಳುತ್ತಾರೆ" ಎಂದು ಕೇಳಿಕೊಂಡರು. ಅಷ್ಟರಲ್ಲಿಯೇ ಆ ಡಕಾಯಿತನ ಮಡದಿಯೇ ಅಲ್ಲಿ ಕಾಣಿಸಿಕೊಂಡಳು. ಒಡನೆಯೇ ಶ್ರೀಮಾತೆಯವರು ಆಕೆಯ ಕೈಹಿಡಿದು ವಿಶ್ವಾಸದಿಂದ "ಅಮ್ಮಾ, ನಾನು ನಿನ್ನ ಮಗಳು ಶಾರದೆ, ನನ್ನ ಜೊತೆಯವರೆಲ್ಲ ನನ್ನನ್ನು ಬಿಟ್ಟು ಮುಂದೆ ನಡೆದುದರಿಂದ ನಾನು ಈ ಭಯಂಕರ ಸ್ಥಿತಿಗೆ ಸಿಲುಕಿದೆ. ಪುಣ್ಯಕ್ಕೆ ನನ್ನ ಅದೃಷ್ಟ ಚೆನ್ನಾಗಿತ್ತು; ನೀನೂ ತಂದೆಯೂ ಬಂದುಬಿಟ್ಟಿರಿ. ಇಲ್ಲದಿದ್ದರೆ ನನ್ನ ಗತಿ ಏನಾಗು

ತ್ತಿತ್ತೋ" ಎಂದು ಧೈರ್ಯದಿಂದ ಹೇಳಿದರು. ಪ್ರೇಮರಸಭರಿತವಾದ ಆ ಮಾತುಗಳಿಂದ ಶ್ರೀಮಾತೆ, ಆ ದರೋಡೆ ದಂಪತಿಗಳ ಹೃದಯಗಳನ್ನು ಗೆದ್ದುಕೊಂಡರು. "ಇವಳು ನಮ್ಮ ಮಗಳೆಂದಾದಮೇಲೆ ನಾವು ಕಾಪಾಡಲೇಬೇಕಲ್ಲವೆ" ಎಂಬ ಕರ್ತವ್ಯಭಾರದಿಂದ ಅವರು ಶ್ರೀಮಾತೆಯವರನ್ನು ದಡ ಮುಟ್ಟಿಸಿದರು. ಅಷ್ಟು ಮಾತ್ರವಲ್ಲ, ಅನೇಕ ಬಾರಿ ದಕ್ಷಿಣೇಶ್ವರದ, 'ಅಳಿಯಂದಿರ' ದರ್ಶನವನ್ನೂ ಮಾಡಿಕೊಂಡುಹೋದರು.

## ಅಂಗೈಲಿಟ್ಟು ಮುಂಗೈಲಿ ಮುಚ್ಚಿಕೊಂಡರು

ಶ್ರೀರಾಮಕೃಷ್ಣರು ಶ್ರೀಮಾತೆಯವರನ್ನು ಅತ್ಯಂತ ಪ್ರೀತ್ಯಾದರಗಳಿಂದ ತಮ್ಮ ಜೀವನಪರ್ಯಂತ ನಡೆಸಿಕೊಂಡರು. ಅವರಿಗೆ ಅನಾರೋಗ್ಯವೆಂದು ತಿಳಿದಾಗ ಸೂಕ್ತವಾದ ಉಪಚಾರ ಮಾಡಿದರು; ಅವರನ್ನು ಅಂಗೈಲಿಟ್ಟು ಮುಂಗೈಲಿ ಮುಚ್ಚಿಕೊಂಡು ಕಾಪಾಡಿದರು. ಶ್ರೀಮಾತೆಯವರೂ ಹಾಗೆಯೇ ಸಹಧರ್ಮಿಣಿಯಾಗಿ ಪರಮಹಂಸರ ಸೇವೆ ಮಾಡಿದರು. ಈ ಪುಣ್ಯಜೀವಿಗಳ ಸಾಧನೆ ಸಿದ್ಧಿಗಳು ಒಂದಕ್ಕೊಂದು ಹೆಣೆದುಕೊಂಡುಬಿಟ್ಟಿವೆ. ಶ್ರೀಮಾತೆಯಿಲ್ಲದ ಪರಮಹಂಸರನ್ನಾಗಲಿ, ಪರಮಹಂಸರಿಲ್ಲದ ಶ್ರೀಮಾತೆಯನ್ನಾಗಲಿ ನಾವು ಕಲ್ಪಿಸಿಕೊಳ್ಳುವುದೇ ಸಾಧ್ಯವಿಲ್ಲ. ಅವರಿಬ್ಬರೂ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ೧೮೮೬ನೆಯ ಆಗಸ್ಟ್ ತಿಂಗಳಲ್ಲಿ ಪರಮಹಂಸರು ಮಹಾಸಮಾಧಿಯನ್ನು ಹೊಂದಿದಮೇಲೆ ಶ್ರೀಮಾತೆಯವರು ಬೇಕಾದಷ್ಟು ಕಷ್ಟನಿಷ್ಠುರಗಳನ್ನು ಶಾಂತಭಾವದಿಂದಲೇ ಅನುಭವಿಸಿದರು. ತಮ್ಮ ಬಂಧುಬಳಗದವರ, ಶಿಷ್ಯಕೋಟಿಯ ಸೇವೆಗಾಗಿ ತಮ್ಮ ಜೀವವನ್ನು ತೇಯ್ದರು. ಶ್ರೀರಾಮಕೃಷ್ಣರು ಹೊರಿಸಿಹೋಗಿದ್ದ ಲೋಕೋದ್ಧಾರದ ಕಾರ್ಯಗಳನ್ನು ಯಥಾವತ್ತಾಗಿ ಮುನ್ನಡೆಸಿದರು. ವಿವೇಕಾನಂದರೇ ಆದಿಯಾದ ನೇರಶಿಷ್ಯಕೋಟಿಗೆ ಸೂಕ್ತವಾದ ಮಾರ್ಗದರ್ಶನನೀಡಿ, ಪರಮಹಂಸರಿಲ್ಲವೆಂಬ ಕೊರತೆ ಮೈದೋರದಂತೆ ನೋಡಿಕೊಂಡರು.

## ಮಂತ್ರದೀಕ್ಷೆಯಿಂದ ಪುನೀತಗೊಳಿಸಿದರು

ಶ್ರೀರಾಮಕೃಷ್ಣರು ನೀಡುತ್ತಿದ್ದ ಮಂತ್ರದೀಕ್ಷೆಯ ಮಹಾಕಾರ್ಯವನ್ನು, ಶ್ರೀಮಾತೆಯವರು ಭಕ್ತರ ಉದ್ಧಾರಕ್ಕಾಗಿ ಮುಂದುವರಿಸಿದರು. ತಾವು ಅಖಂಡವಾದ ತಪಸ್ಸಿನಲ್ಲಿ ತಮ್ಮನ್ನು ಸವೆಸಿಕೊಂಡು ಆ ಪುಣ್ಯಫಲವನ್ನೆಲ್ಲ ಶಿಷ್ಯಕೋಟಿಯ ಹಿತಕ್ಕಾಗಿ ಧಾರೆಯೆರೆದರು. ಶ್ರೀರಾಮಕೃಷ್ಣರು ಯಾರನ್ನಾದರೂ ಸ್ವೀಕರಿಸುವಾಗ ಚೆನ್ನಾಗಿ ಪರಿಕಿಸಿ, ವಿವೇಚಿಸಿ ಮುಂದುವರಿಯುತ್ತಿದ್ದರು. ಆದರೆ ಶ್ರೀಮಾತೆಯವರದು ಅವ್ಯಾಜವಾದ ಮಾತೃವಾತ್ಸಲ್ಯ. "ಶರಣಾದೆ ತಾಯಿ ಕಾಪಾಡು" ಎಂದರೆ ಸಾಕು, ಹಿಂದು ಮುಂದು ನೋಡದೆ ಅವರನ್ನು ತಮ್ಮ ಉಡಿಗೆ ತುಂಬಿಕೊಂಡುಬಿಡುತ್ತಿದ್ದರು. ಯಾರೂ ಅರಗಿಸಿಕೊಳ್ಳಲಾಗದ ಪಾಷಾಣವನ್ನು ತಾವು ಅರಗಿಸಿಕೊಂಡುಬಿಡುತ್ತಿದ್ದರು. ತಮ್ಮ ದೇಹಕ್ಕಾಗುವ ನೋವುಬಾಧೆಗಳನ್ನು ಲೆಕ್ಕಿಸುತ್ತಿರಲಿಲ್ಲ. ಜಾತಿಮತಗಳ ಭೇದವೆಣಿಸದೆ ಭಕ್ತರಿಗೆ ಊಟವಿಕ್ಕಿ ಅವರ ಎಂಜಲನ್ನು ತಾವೇ ಬಳಿಯುತ್ತಿದ್ದರು. ಯಾರಾದರೂ ಆಕ್ಷೇಪಿಸಿದರೆ, "ನೋಡಿ, ನಾನು ಅವರೆಲ್ಲರ ತಾಯಿ, ಮಕ್ಕಳಿಗಾಗಿ ತಾಯಿ ಇದನ್ನೆಲ್ಲ ಮಾಡದೆ ಹೋದರೆ ಇನ್ನಾರು ಮಾಡಬೇಕು" ಎಂದು ಹಾರ್ದಿಕವಾಗಿ ಹೇಳುತ್ತಿದ್ದರು. ಶ್ರೀಮಾತೆಯವರು ಭಾರತದ ಪುಣ್ಯತೀರ್ಥಗಳನ್ನು ಸಂದರ್ಶಿಸಿ ತಮ್ಮ ಚಿತ್ತವನ್ನು ಅರಳಿಸಿಕೊಂಡರು. ದಕ್ಷಿಣದೇಶದ ಯಾತ್ರಾಕಾಲದಲ್ಲಿ ಕರ್ನಾಟಕದ ರಾಜಧಾನಿ ಬೆಂಗಳೂರು ಮಹಾನಗರದ ಶ್ರೀರಾಮಕೃಷ್ಣ ಆಶ್ರಮಕ್ಕೂ ಬಂದು ಅದನ್ನು ತಮ್ಮ ಪಾದಸ್ಪರ್ಶದಿಂದ ಪುನೀತಗೊಳಿಸಿದರು.

## ಶಾರದಾ ಎಂಬ ಶಬ್ದಕ್ಕೆ ಅದೆಷ್ಟೋ ಅರ್ಥಗಳಿವೆ

ಹೀಗೆ ಶ್ರೀಮಾತೆಯವರ ಆಧ್ಯಾತ್ಮಿಕ ವ್ಯಕ್ತಿತ್ವ ಮಹೋನ್ನತವಾದುದು. ಅದರ ಆಳ ಅಗಲಗಳನ್ನು ಇಂತಿಷ್ಟೇ ಸರಿಯೆಂದು ಅಳತೆಮಾಡಿ ಹೇಳುವುದು ಸಾಧ್ಯವಿಲ್ಲ. ಅಪ್ರಮೇಯರಾಗಿ ಬೆಳೆದು ನಿಂತ ಅವರು, ಭಾರತೀಯ ಸ್ತ್ರೀಶಕ್ತಿಯ ಪರಿಪೂರ್ಣದರ್ಶನ ಮಾಡಿಸಿದರು. ಅವರು ಉಪನ್ಯಾಸಗಳನ್ನು ಮಾಡಲಿಲ್ಲ, ಪುಸ್ತಕಗಳನ್ನು ಬರೆಯಲಿಲ್ಲ, ತಮ್ಮ ಶಕ್ತಿವಿಶೇಷಗಳನ್ನು ಪ್ರದರ್ಶಿಸಲಿಲ್ಲ. ಸಾಮಾನ್ಯರಲ್ಲಿ ಸಾಮಾನ್ಯರೆಂಬಂತೆ ತೋರಿಕೊಂಡು ತಮ್ಮ ಸಾಧನೆಯ ಪಥವನ್ನು ಪರಿಷ್ಕರಿಸಿಕೊಳ್ಳುತ್ತಾ, ಇತರರ ಮಾರ್ಗಕ್ಕೂ ಹೂ ಚೆಲ್ಲುತ್ತ ೨೧.೭.೧೯೨೦ರಂದು ಮಹಾಸಮಾಧಿಯನ್ನು ಪಡೆದುಕೊಂಡರು. **ಶಾರದಾ ಎಂಬ ಶಬ್ದಕ್ಕೆ ಅದೆಷ್ಟೋ ಅರ್ಥಗಳಿವೆ. ಸಕಲವಿದ್ಯಾಭಿಮಾನಿ, ಬ್ರಹ್ಮದೇವನ ರಾಣಿ ಎಂಬರ್ಥವಲ್ಲದೆ ನಿರ್ಮಲವಾದ, ಶುಭ್ರವಾದ, ನವೀನವಾದ ಎಂಬೆಲ್ಲ ಅರ್ಥಗಳಿವೆ. ಯಾವ ಅರ್ಥವನ್ನು ಸ್ವೀಕರಿಸಿದರೂ ಸರಿಯೆ, ಅವೆಲ್ಲವೂ ಶ್ರೀಮಾತೆಯನ್ನು ಮುಂದಿಟ್ಟುಕೊಂಡೇ ಅವರ ಬೆಂಬಳಿಯಲ್ಲಿ ಸಾಗುತ್ತವೆ.**

## ಶ್ರೀಮಾತೆಯವರ ಕೃಪೆ ನನ್ನ ಪಾಲಿಗೆ ಅಮೂಲ್ಯ

ಸ್ವಾಮಿ ವಿವೇಕಾನಂದರು ತಮ್ಮ ಸೋದರಸಂನ್ಯಾಸಿಗಳಾದ ಸ್ವಾಮಿ ಶಿವಾನಂದರಿಗೆ ಬರೆದ ಪತ್ರವೊಂದರಲ್ಲಿ ಶ್ರೀಮಾತೆಯವರ ಮಹೋನ್ನತಿಯನ್ನು ಅರಿಯುವುದು ಕಠಿಣವೆಂಬುದನ್ನು ಒತ್ತಿ ಹೇಳುತ್ತ, ಆ ಜಗನ್ಮಾತೆಯ ಕೃಪಾಶೀರ್ವಾದಗಳಿಗಾಗಿ ಹಂಬಲಿಸಿದ್ದಾರೆ. "ಶ್ರೀಮಾತೆಯವರ ಜೀವನದ ಮಹತ್ವವನ್ನು ನಿಮ್ಮಲ್ಲಿ ಇನ್ನೂ ಯಾರೂ ಅರ್ಥಮಾಡಿಕೊಂಡಿಲ್ಲ. ಆದರೆ ಕಾಲಕ್ರಮದಲ್ಲಿ ನೀವು ಅದನ್ನು ಅರಿಯುವಿರಿ. ಆದ್ಯಾಶಕ್ತಿಯ ಅನುಗ್ರಹವಿಲ್ಲದೆ ಜಗತ್ತಿಗೆ ಉದ್ಧಾರವಿಲ್ಲ. ಶ್ರೀಮಾತೆಯವರ ಕೃಪೆ ನನ್ನ ಪಾಲಿಗೆ ಶ್ರೀರಾಮಕೃಷ್ಣರ ಕೃಪೆಗಿಂತಲೂ ನೂರುಪಟ್ಟು, ಸಾವಿರಪಟ್ಟು ಅಮೂಲ್ಯ. ಶ್ರೀರಾಮಕೃಷ್ಣರ ವಿಚಾರದಲ್ಲಿ ನೀನು ಅವರನ್ನು ದೇವರೆಂದಾದರೂ ಕರೆ, ಮನುಷ್ಯನೆಂದಾದರೂ ಕರೆ, ಅಥವಾ ಇನ್ನೇನು ಬೇಕಾದರೂ ಕರೆದುಕೊ. ಆದರೆ ಶಾರದಾದೇವಿಯವರನ್ನು ಯಾರು ಸಾಕ್ಷಾತ್ ಜಗನ್ಮಾತೆಯೆಂದು ಒಪ್ಪಿ ಗೌರವಿಸುವುದಿಲ್ಲವೋ ಅವನಿಗೆ ಧಿಕ್ಕಾರವಿರಲಿ" ಎಂದು ಅವರು ಬರೆದಿದ್ದಾರೆ.

◆